

ಭಾಷಾಪಾಠಗಳನ್ನೂ ಹೀಗೆ ರಚನಾತ್ಮಕವಾಗಿ ರೂಪಿಸಿಕೊಟ್ಟಾಗ, ಮಕ್ಕಳ ಮನಸ್ಥಿತಿಯಲ್ಲಿ ಖಂಡಿತ ಬದಲಾವಣೆಯಾಗುತ್ತದೆ.

‘ಪಠ್ಯಪುಸ್ತಕ ರಚನಾ ಪ್ರಕ್ರಿಯೆ ಒಂದು ವೈಜ್ಞಾನಿಕ ಕ್ರಿಯೆಯಾಗಿದೆ. ಅದಕ್ಕೆ ಪೂರ್ವದಲ್ಲಿ ಸಮಾಜದ ಗತಿಯನ್ನು ಗಮನಿಸುವ ಸಂಶೋಧನೆಯು ನಡೆಯಬೇಕು. ಯಾಕೆಂದರೆ ನಮ್ಮ ಮುಂದಿನ ಸಮಾಜವನ್ನು ರೂಪಿಸುವ ಸಾಲುಗಳು ಮಕ್ಕಳ ಪಠ್ಯಪುಸ್ತಕಗಳಲ್ಲಿ ಇರಬೇಕು’ ಎನ್ನುತ್ತಾರೆ ಶರ್ಮಾ.

ಹದಿವಯಸ್ಸಿನವರಿಗೆ ತಿಳಿ ಹೇಳುವ ಮನಸ್ಥಿತಿಯನ್ನು ದೊಡ್ಡವರು ರೂಪಿಸಿಕೊಳ್ಳಬೇಕಾಗಿದೆ. ಅದಕ್ಕೆ ತಕ್ಕ ವಾತಾವರಣವನ್ನೂ ರೂಪಿಸಿಕೊಳ್ಳಬೇಕಾಗಿದೆ. ಅತ್ಯಾಚಾರ ನಡೆಸಿದ ಆರೋಪಿಯು ಜೈಲಿನಿಂದ ಬಿಡುಗಡೆಯಾಗಿ ಬರುವಾಗ ಹಾರ ತುರಾಯಿಗಳೊಂದಿಗೆ ಸ್ವಾಗತ ಕೋರಿದ ಸುದ್ದಿಯನ್ನು ಮಕ್ಕಳು ಹೇಗೆ ಸ್ವೀಕರಿಸುತ್ತಾರೆ ಎಂಬ ಲಜ್ಜೆ, ಆತಂಕ ದೊಡ್ಡವರಲ್ಲಿ ಇರಬೇಕು. ಇಂತಹ ಸುದ್ದಿಗಳು ಗಂಡುಮಕ್ಕಳ ಮನಸ್ಸಿನಲ್ಲಿ ಬಿತ್ತುವ ಆಲೋಚನೆಯ ಬೀಜಗಳೇನು? ಹೆಣ್ಣುಮಕ್ಕಳ ಮನದಲ್ಲಿ ಬಿತ್ತುವ ಆತಂಕಗಳ ತೀವ್ರತೆಯೇನು? ಎನ್ನುವ ಬಗ್ಗೆ ಯೋಚಿಸಬೇಕು. ಅತ್ಯಾಚಾರದ ಆರೋಪಿಗಳು ಶ್ರೀಮಂತರಾಗಿದ್ದಾಗ ಅವರಿಗೆ ಲಭ್ಯವಾಗುವ ದಾರಿಗಳು ಯಾವುವು, ಬಡವರಾಗಿದ್ದಾಗ ಅವರಿಗೆ ದೊರೆಯುವ ದಾರಿಗಳು ಯಾವುವು ಎನ್ನುವುದನ್ನು ಹದಿವಯಸ್ಸಿನವರು ಗಮನಿಸುತ್ತಾರೆ ಎನ್ನುವುದೂ ಪೋಷಕರಿಗೆ ತಿಳಿದಿರಬೇಕು.

## ಗುರ್ತಿಸುವ ಕಲೆ

ಲೈಂಗಿಕ ಶಿಕ್ಷಣ ದೊರೆತಾಗ ಮಕ್ಕಳ ಯೋಚನೆಗಳ ಧಾಟಿ ಬದಲಾಗುತ್ತದೆ. ಅವರು ತಮ್ಮ ಸುತ್ತಮುತ್ತ ನಡೆಯುವ ದೌರ್ಜನ್ಯಗಳನ್ನು ‘ದೌರ್ಜನ್ಯ’ ಎಂದು ಗುರ್ತಿಸುವುದನ್ನು ಕಲಿಯುತ್ತಾರೆ. ಅದಕ್ಕೊಂದು ಉದಾಹರಣೆಯನ್ನು ಮಕ್ಕಳ ಆಪ್ತ ಸಮಾಲೋಚಕಿ ಚಿತ್ರಾ ಕೊಡುತ್ತಾರೆ: ‘ತರಗತಿಯಲ್ಲಿ ಪುಟ್ಟ ಹುಡುಗಿಯೊಬ್ಬಳು ದೈಹಿಕವಾಗಿ ತನ್ನೊಡನೆ ಹೀಗೆ ವರ್ತಿಸು ಎಂದು ಸಹಚರರಿಗೆ ತಾನಾಗಿಯೇ ಹೇಳುತ್ತಿದ್ದಳು. ಆಕೆಯ ಸಲಹೆಯನ್ನು ಗಮನಿಸಿದ ಹುಡುಗನೊಬ್ಬ, ಆ ವಿಷಯವನ್ನು ಟೀಚರ್‌ಗೆ ತಿಳಿಸಿದ್ದ. ಹುಡುಗಿಯನ್ನು ಅಕ್ಕರೆಯಿಂದ ಮಾತನಾಡಿಸಿದಾಗ ನಿಜ ವಿಷಯ ಏನೆಂದು ಗೊತ್ತಾಯಿತು. ಮನೆಯಲ್ಲಿ ಆಕೆ ದೈಹಿಕವಾಗಿ ದೌರ್ಜನ್ಯಕ್ಕೆ ಒಳಗಾಗುತ್ತಿದ್ದುದರಿಂದ, ಅದೊಂದು ಸಹಜ ವಿಚಾರವೆಂದೇ ಮಗು ಭಾವಿಸುತ್ತಿತ್ತು. ಆದರೆ ಅದು ಅಸಹಜ ನಡವಳಿಕೆ ಎಂದು ಗುರುತಿಸುವಷ್ಟು ಜವಾಬ್ದಾರಿಯನ್ನು ಆಕೆಯ ಜೊತೆಗಿದ್ದ ಆ ಹುಡುಗ ಪ್ರದರ್ಶಿಸಿದ್ದ. ಗಂಡುಮಕ್ಕಳಲ್ಲಿ ಇಂತಹ ಅರಿವಿದ್ದಾಗ, ಆರೋಗ್ಯಕರ ವಾತಾವರಣ ಸಹಜವಾಗಿ ಮೂಡುತ್ತದೆ.

ಮಕ್ಕಳದು ತಿಳಿಯಾದ ಮನಸು. ಗಂಡುಮಕ್ಕಳಾಗಲೀ ಹೆಣ್ಣುಮಕ್ಕಳಾಗಲೀ ಕೆಟ್ಟ ಮಕ್ಕಳಂತೂ ಜಗತ್ತಿನಲ್ಲಿ ಇರಲಾರರು. ಅವರಿಗೆ ತಿಳಿಹೇಳುವ ವಿಧಾನ ಹೇಗಿರುತ್ತದೆ ಎನ್ನುವುದರ ಮೂಲಕ ಅವರ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಗಂಡುಮಕ್ಕಳ ಮೇಲೆ ವಿಪರೀತ ಜವಾಬ್ದಾರಿಗಳನ್ನು ಹೊರಿಸುವುದೂ ಸರಿಯಲ್ಲ. ಹೆಚ್ಚು ಸ್ವಾತಂತ್ರ್ಯ ನೀಡುವುದೂ ಸರಿಯಲ್ಲ. ಸಮಬಾಳುವೆಗೆ ಗಂಡು ಮತ್ತು ಹೆಣ್ಣುಮಕ್ಕಳನ್ನು ಸಜ್ಜುಗೊಳಿಸುವುದೇ ಕುಟುಂಬವೊಂದರ ಆಶಯವಾಗಬೇಕು; ಶಿಕ್ಷಣ ವ್ಯವಸ್ಥೆಯ ಆಶಯವಾಗಬೇಕು. ಈ ಆಶಯಗಳ ಸಾಕಾರಕ್ಕಾಗಿ ಸಮಾಜದ ಪ್ರತಿಯೊಂದು ಘಟಕವೂ ತನ್ನ ಕಾರ್ಯವೈಖರಿಯಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗಿದೆ.

ಪ್ರತಿಕ್ರಿಯಿಸಿ: feedback@sudha.co.in